ಮಧುಳನ್ನೇ ಗಮನವಿಟ್ಟು ನೋಡುತ್ತಾರೆ. ಮಧುಗೆ ಅದು ಬೇಡವಾಗಿದೆ. ಅವಳು ಮೆಟ್ಟಿಲು ಹತ್ತುತ್ತಿದ್ದಂತೆ ತನ್ನ ಸೀರೆಯ ಅಂಚಿನ ಮೇಲೆ ಕಾಲಿಟ್ಟು ಮುಗ್ಗರಿಸುತ್ತಾಳೆ. ವೃದ್ಧ ಮಹಿಳೆ ಅವಳನ್ನು ಹಿಡಿದುಕೊಳ್ಳುತ್ತಾಳೆ. ಮಧು ಮಾತ್ರ ಕೈಯನ್ನು ಕೊಸರಿಕೊಳ್ಳುತ್ತಾಳೆ. ನನಗೆ ಮಧುಳ ನಡವಳಿಕೆ ಸರಿಬರುವುದಿಲ್ಲ. ಇವಳು ಬರುಬರುತ್ತ ಧಿಮಾಕು ಬೆಳೆಸಿಕೊಳ್ಳುತ್ತಿದ್ದಾಳೆ ಎನಿಸುತ್ತದೆ.

ಹೊಟೇಲಿನ ಲೌಂಚ್‌ನಲ್ಲಿ ಸೋಫಾದ ಮೇಲೆ ಕುಸಿದು ಕುಳಿತಾಗ, ಮಧು ತನ್ನ ವ್ಯಾನಿಟಿ ಬ್ಯಾಗನ್ನು ಟೀಪಾಯ್ ಮೇಲೆ ಎಸೆದು ಟಾಯ್ಲೆಟ್‌ಗೆ ಹೋಗುತ್ತಾಳೆ. ಕೈಯಲ್ಲಿನ ಮುಗಿಯುತ್ತ ಬಂದಿರುವ ಸಿಗರೇಟನ್ನು ಮತ್ತೊಮ್ಮೆ ಎಳೆದು ಹೊಗೆ ಬಿಡುತ್ತಾ ಕುಳಿತುಕೊಳ್ಳುತ್ತೇನೆ. ಇನ್ನು ಇವಳ ಜತೆಗೆ ಊಟ ತಿಂದು ರಿಕ್ಷಾದಲ್ಲಿ ಕುಳಿತು, ಹಾಸ್ಟೆಲ್ ಬಳಿ ಇವಳನ್ನು ಇಳಿಸಿ ನಾನು ರೂಮು ಸೇರಿಕೊಳ್ಳಬೇಕು – ಎಂದು ಯೋಚನೆ ಮಾಡುತ್ತಿದ್ದಂತೆ, ಎಲ್ಲಿಲ್ಲದ ಕೋಪ ಬರುತ್ತದೆ. ಇವಳು ಬಂದರೆಷ್ಟು, ಬಿಟ್ಟರೆಷ್ಟು ಹೋಗಿಬಿಡೋಣ ಎನ್ನಿಸಿ ಎದ್ದು ನಿಲ್ಲುತ್ತೇನೆ.

'ಆನಂದ್, ಪ್ಲೀಸ್' ಎಂದು ನನ್ನ ಬೆನ್ನಿಗೇ ಅವಳು ಕೂಗುತ್ತಾಳೆ. 'ನಿಮ್ಮಿಂದ ನನಗೊಂದು ದೊಡ್ಡ ಉಪಕಾರವಾಗಬೇಕಿದೆ.'

'ಅದೇ ನೀನು ಮಾಡಿದ ತಪ್ಪನ್ನು–ಸಿನಿಮಾಕ್ಕೆ ಬರಲಿಕ್ಕೆ ಆಗಲಿಲ್ಲ, ಅನ್ನೋದನ್ನ ಕ್ಷಮಿಸಬೇಕು ತಾನೆ?'– ಹಿಂತಿರುಗಿ ಅವಳ ಮುಖ ನೋಡಿದಾಗ, ನನ್ನ ಮಾತುಗಳು ಹರಿತ ಕಳೆದುಕೊಂಡಂತೆ ಕಾಣುತ್ತದೆ. ಅವಳ ಕೆನ್ನೆಯ ಮೇಲಿನ ಕಣ್ಣೀರು ನನ್ನನ್ನು ಚುರುಗುಟ್ಟಿಸುತ್ತದೆ.

'ನಿಮಗೆ ನನ್ನ ತಪ್ಪು ಮಾತ್ರ ಗೊತ್ತಾಗುತ್ತದೆ. ಆದರೆ ನನ್ನ ಕಷ್ಟ ನಿಮಗೆ ಹೇಗೆ ಗೊತ್ತಾಗಬೇಕು!'

ನಾನು ಹಿಂದಕ್ಕೆ ಹೆಜ್ಜೆಯಿಟ್ಟು ಸೋಫಾದಲ್ಲಿ ಮತ್ತೆ ಕೂಡುತ್ತೇನೆ. ಮಧು ನನ್ನ ಪಕ್ಕದಲ್ಲೆ ಕುಳಿತುಕೊಳ್ಳುತ್ತಾಳೆ.

'ನನಗೆ ಕಷ್ಟ ಇಲ್ಲ ಅಂತಲ್ಲ, ಮಧು. ಕಷ್ಟ ಯಾರಿಗಿಲ್ಲ? ಆದರೆ ನನಗೆ ಕೈಕೊಟ್ಟು ಹೀಗೆ ಮಾಡಿದರೆ...'

'ನಾನು ಕೊಟ್ಟೆ ಅಂತಲೆ? ಅದಕ್ಕಿಂತ ಒಳ್ಳೇ ಮಾತು ನಿಮಗೆ ಬರದೆ ಇದ್ದರೆ ನಾನೇನು ಮಾಡಲಿ? ನೀವು ಅದ್ಯಾಕೆ ಇಷ್ಟೊಂದು ಸಿಟ್ಟಾಗಿದೀರೊ...'

'ಆರು ಗಂಟೆಯಿಂದ ಒಂಬತ್ತೂಕಾಲು ಗಂಟೆಯವರೆಗೂ ನಿನಗಾಗಿ ಕಾದಿದ್ದು, ಏನು ತಮಾಷೆ ಅಂದುಕೊಂಡೆಯಾ?'

ಮಧು ಏನು ಉತ್ತರವನ್ನೂ ಕೊಡಲಿಲ್ಲ. ತನ್ನ ವ್ಯಾನಿಟಿ ಬ್ಯಾಗಿನಿಂದ ಎರಡು ಕಾಗದ ತೆರೆದು ನನ್ನ ಮುಂದೆ ಹಿಡಿದಳು. ಒಂದು ಟೆಲಿಗ್ರಾಂ, ಇನ್ನೊಂದು ದೀರ್ಘಕಾಗದ. ಟೆಲಿಗ್ರಾಂನಲ್ಲಿ ಇದ್ದದ್ದು: ಪಾರ್ಟಿ ಇವೊತ್ತು ಬರ್ತಾರೆ. ಕೂಡಲೇ ಹೊರಟು ಬಾ.

ಕಾಗದವನ್ನು ಬಿಡಿಸಿ ಓದುವ ಮೊದಲು ಮಧುಳನ್ನು ಕೇಳಿದೆ–

'ಆರುಗಂಟೆ ಟ್ರೈನ್‌ಗೆ ಯಾಕೆ ಹೋಗಲಿಲ್ಲ?'

'ನಿಮ್ಮ ಆಫೀಸರ್ ಅನಿಸಿಕೊಂಡ ಆ ಗೃಧ್ರ ಇದೆಯಲ್ಲ, ಅವನ ವಿಷಯ ಮತ್ತೆ ಹೊಸದಾಗಿ ಬೇರೆ ಹೇಳಬೇಕೆ?'

'ಟೆಲಿಗ್ರಾಂ ತೋರಿಸಿದರೂ ಬಿಡಲಿಲ್ಲವೆ ಅವನು?'

'ಸ್ಸರಿಸ್ಸರಿ... ಆ ನಮ್ಮಮ್ಮ ಅವಳಿಗೊಬ್ಬಳಿಗೆ ಬುದ್ಧಿಯಿಲ್ಲ – ಪ್ರತಿಸಾರಿನೂ ಹೀಗೇ ಮಾಡ್ತಿದಾಳೆ. ನಮ್ಮ ಸಂಕಟ ಅವಳಿಗೆ ಹ್ಯಾಗೆ ಗೊತ್ತಾಗಬೇಕು? ರೇಖಾನ ನೋಡಲಿಕ್ಕೆ ಬರೋದು ರೇಖಾನ ಹೆಸರನ್ನಾದರೂ ಸೇರಿಸು ಅಂದರೂ ಸಹ, ಅವಳಿಗೆ ಅರ್ಥವೇ ಆಗೋದಿಲ್ಲ...'